# ದಕ್ಷಿಣೇಶ್ವರದ ದಯಾಸಿಂಧು

## ಶ್ರೀರಾಮಕೃಷ್ಣ ಪರಮಹಂಸರ ಜೀವನಗಾಥೆ


ಶ್ರೀರಾಮಕೃಷ್ಣರ ಹಲವು ಜೀವನ ಚರಿತ್ರೆಗಳು ಈಗಾಗಲೇ ಹೊರ ಬಂದಿವೆ. ಅವುಗಳಲ್ಲಿ ವಿಸ್ತಾರವಾದ, ಸಂಕ್ಷಿಪ್ತವಾದ, ವಿಶ್ಲೇಷಣಾತ್ಮಕವಾದ ಹಲವು ಬಗೆಯ ಗ್ರಂಥಗಳು ಪ್ರಕಟವಾಗಿದ್ದರೂ, ಒಬ್ಬೊಬ್ಬ ಲೇಖಕನೂ ಆ ಮಹಾಚೇತನದ ಒಂದೊಂದು ಮುಖವನ್ನು ತನ್ನದೇ ಆದ ರೀತಿಯಲ್ಲಿ ಗ್ರಹಿಸುತ್ತಾನೆ; ಅದನ್ನೇ ತನ್ನ ಗ್ರಂಥದಲ್ಲಿ ತನಗೆ ವಿಶಿಷ್ಟವಾದ ರೀತಿಯಲ್ಲಿ ಪ್ರಸ್ತುತಪಡಿಸುತ್ತಾನೆ. ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ ಅವರು ಇತ್ತೀಚೆಗೆ ಪ್ರಕಟಿಸಿದ ಗ್ರಂಥ '**ದಕ್ಷಿಣೇಶ್ವರದ ದಯಾಸಿಂಧು**' ಕೆಲವೊಂದು ರೀತಿಯಲ್ಲಿ ನೂತನವಾಗಿದೆ.

ಈ ಗ್ರಂಥದಲ್ಲಿ ಶ್ರೀರಾಮಕೃಷ್ಣರ ಜೀವನದ ಘಟನೆಗಳ ಸುಲಲಿತವಾದ ಚಿತ್ರಣವಿದೆ. ಅಚ್ಚುಕಟ್ಟಾದ ಮಾತಿನ ಶೈಲಿ, ನಾಟಕೀಯವಾದ ನಿರೂಪಣೆ ಹಾಗೂ ಸುಲಭಗ್ರಾಹ್ಯವಾದ ಕಥನಕ್ರಮ ಇಲ್ಲಿನದು. ಕಥೆ ಮುಂದಕ್ಕೆ ಸಾಗುತ್ತಿದ್ದಂತೆ ನಡುನಡುವೆ ಸಂದರ್ಭೋಚಿತವಾದ ಚಿತ್ರಗಳು, ಅವುಗಳನ್ನು ವಿವರಿಸುವ ಶೀರ್ಷಿಕೆಗಳು ಮನಸೆಳೆಯುತ್ತವೆ. ಶ್ರೀರಾಮಕೃಷ್ಣರ ಜೀವನ ಲೀಲೆ, ಅವರೊಂದಿಗೆ ಒಡನಾಡಿದ ವ್ಯಕ್ತಿಗಳ, ಅವರು ಓಡಾಡಿದ ಸ್ಥಳಗಳ ಹಾಗೂ ಪ್ರಮುಖ ಘಟನೆಗಳ ಚಿತ್ರಗಳು ಓದುಗನಿಗೆ ಆಯಾ ಸಂದರ್ಭದ ಚಿತ್ರಣವನ್ನು ಕಟ್ಟಿಕೊಡುತ್ತವೆ. ಈ ಮೂಲಕ ಓದಿನ ಅನುಭವ ಇನ್ನಷ್ಟು ದಟ್ಟವಾಗುತ್ತದೆ. ವಿನೂತನ ಶೈಲಿಯ ಈ ಜೀವನಚರಿತ್ರೆ ಆಕರ್ಷಕವಾಗಿಯೂ, ಹೃದಯಂಗಮವೂ ಆಗಿ ಮೂಡಿಬಂದಿದೆ.

ಇನ್ನೊಂದು ಪ್ರಧಾನ ಸಂಗತಿಯೆಂದರೆ, ಶ್ರೀರಾಮಕೃಷ್ಣರ ಜೀವನ ಹಾಗೂ ವ್ಯಕ್ತಿತ್ವಕ್ಕೆ ಸಂಬಂಧಿಸಿದ ವಿವರಗಳು ಬಂದಾಗಲೆಲ್ಲ ಅಲ್ಲಲ್ಲಿ 'ಸಾದೃಶ್ಯ' ಎಂಬ ಹೆಸರಿನ ಭಾಗಗಳನ್ನು ಸೇರಿಸಿರುವುದು. ಮುನ್ನುಡಿಯಲ್ಲಿ ಈ ಕುರಿತ ವಿವರ ಹೀಗಿದೆ: ''ಈ ಪುಸ್ತಕವು ಶ್ರೀರಾಮಕೃಷ್ಣರ ಜೀವನ ಗಂಗಾ ಪ್ರವಾಹದ ಒಂದು ಕಿರುನೋಟ. ಅವರ ಸಾಧನೆ, ಉಪದೇಶಗಳನ್ನು ಕುರಿತ ಒಂದು ಪುಟ್ಟ ಚಿತ್ರಣ. ಇದರ ವಿಶೇಷವೆಂದರೆ, ಶ್ರೀರಾಮಕೃಷ್ಣರಂತೆಯೇ ಮಹಾಸಾಧಕರೂ, ಬೋಧಕರೂ, ಅನುಭಾವಿಗಳೂ ಆದ ಹಲವು ಮಹಾತ್ಮರ ಜೀವನದ ಕೆಲವು ಸಮಾನ ಘಟನೆಗಳನ್ನು ನೀಡಿರುವುದು.''

ಹೆಚ್ಚಾಗಿ ಶೃಂಗೇರಿ ಪೀಠದ ಜಗದ್ಗುರುಗಳಾಗಿದ್ದ ಶ್ರೀಚಂದ್ರಶೇಖರ ಭಾರತೀ ಸ್ವಾಮಿಗಳ, ಶ್ರೀರಮಣ ಮಹರ್ಷಿಗಳ ಹಾಗೂ ಬ್ರಹ್ಮಚೈತನ್ಯ ಗೋಂದಾವಲಿಯವರ ಜೀವನ, ವ್ಯಕ್ತಿತ್ವದೊಂದಿಗೆ ಈ ಸಾದೃಶ್ಯಗಳನ್ನು ಮಾಡಲಾಗಿದೆ. ಅವತಾರ ಪುರುಷನೊಬ್ಬನ ಜೀವನಕ್ಕೂ ಇತರ ಸಂತರ ಜೀವನಗಳಿಗೂ ಈ ಬಗೆಯ ಹೋಲಿಕೆ, ವಿಶ್ಲೇಷಣೆ ಎಷ್ಟು ಸಮಂಜಸ ಎಂಬ ಪ್ರಶ್ನೆ ಉಳಿದುಕೊಳ್ಳುವುದಾದರೂ ಆಧ್ಯಾತ್ಮಿಕ ಜಗತ್ತಿನ ಹತ್ತು ಹಲವು ಘಟನೆಗಳಲ್ಲಿ ಕಂಡುಬರುವ ಸಮಾನತೆಯನ್ನು ಒಂದೆಡೆ ಇಟ್ಟು ನೋಡುವುದು ಕುತೂಹಲಕರವಾದ ಸಂಗತಿಯಾಗಿದೆ. ಮಹಾನ್ ಸಾಧಕರ ಆಧ್ಯಾತ್ಮಿಕ ಔನ್ನತ್ಯವನ್ನು ಸಾಮಾನ್ಯರು ಅಳೆಯಲಾಗದು ನಿಜ; ಆದರೆ ಅವುಗಳ ವಿಶಿಷ್ಟತೆಯನ್ನು ಅರಿಯಲು ತುಲನಾತ್ಮಕ ವಿಶ್ಲೇಷಣೆ ಮಾಡುವುದು ಒಂದು ಬಗೆಯಲ್ಲಿ ಪ್ರಯೋಜನಕಾರಿ. ಓದುಗನ ಅಭಿರುಚಿ, ಬುದ್ಧಿಶಕ್ತಿ, ವಿವೇಕ ಇವುಗಳಿಗೆ ತಕ್ಕಂತೆ ಈ ಆಧ್ಯಾತ್ಮಿಕ ಅನುಭವಗಳ ಆಳ-ಅಗಲಗಳನ್ನು ಕಂಡುಕೊಳ್ಳುವುದು ಹೆಚ್ಚು ಸಮರ್ಪಕವಾದೀತು.

ಉತ್ತಮ ಮುದ್ರಣ, ಆಕರ್ಷಕ ರಕ್ಷಾಪುಟ, ಓದಿಸಿಕೊಂಡು ಹೋಗುವ ಶುದ್ಧ ಶೈಲಿ – ಈ ಎಲ್ಲ ಕಾರಣಗಳಿಂದ 'ದಕ್ಷಿಣೇಶ್ವರದ ದಯಾಸಿಂಧು' ಒಂದು ಉತ್ತಮ ಜೀವನಚರಿತ್ರೆಯ ಗ್ರಂಥವಾಗಿದೆ. ಕಥೆಯು ಹೇಗೆ ಹೃದಯಂಗಮವೋ, ಅಷ್ಟೇ ಬೌದ್ಧಿಕವಾಗಿ ಕೂಡ ಓದುಗನನ್ನು ಉನ್ನತಿಗೇರಿಸಬಲ್ಲುದು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ.




*ಕೃತಿ :* ದಕ್ಷಿಣೇಶ್ವರದ ದಯಾಸಿಂಧು
*ಲೇಖಕರು :* ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ
*ಪ್ರಕಾಶಕರು :* ಮಹಿಮಾ ಪ್ರಕಾಶನ, ನಂ. 1393/2, ಸಿ.ಎಚ್-31, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು - 570 004
*ಪುಟಗಳು:* 208 *ಬೆಲೆ :* 160/